

## ಆತಂಕ, ಭಯದ ಜುಗಲಬಂದಿ

ಮಂಗಳೂರಿನ ‘ವಿಶ್ವಾಸ್ ಟ್ರಸ್ಟ್’ ಹಿರಿಯ ನಾಗರಿಕರ ಸಹಾಯವಾಣಿಯ ಉಸ್ತುವಾರಿ ನೋಡಿಕೊಳ್ಳುವ ಲಿಡ್ವಿನ್ ಲೋಬೊ, ‘ಕುಟುಂಬಗಳೊಳಗೆ ಸಾಮಾನ್ಯವಾಗಿ ಇದ್ದ ಒತ್ತಡಗಳು, ವೈಮನಸ್ಸು, ಬಿಕ್ಕಟ್ಟುಗಳು ಕೋವಿಡ್ ಸಂದರ್ಭದಲ್ಲಿ ಬಿಗಡಾಯಿಸಿದ್ದು ಹೌದು’ ಎಂದು ಒಪ್ಪುತ್ತಾರೆ. ‘ಮಕ್ಕಳೆಲ್ಲ ತಮ್ಮ ದುಡಿಮೆಯ ಕಾರಣದಿಂದ ಹೆತ್ತವರಿಂದ ದೂರವಾಗಿದ್ದಾರೆ. ಸಾಕಷ್ಟು ಆರ್ಥಿಕ ಸವಲತ್ತಿದ್ದರೂ, ದಿನನಿತ್ಯದ ವ್ಯವಹಾರಗಳನ್ನು ನಿಭಾಯಿಸಲು ಹಿರಿಯ ನಾಗರಿಕರಿಗೆ ಕಷ್ಟವಾಗುತ್ತಿದೆ’ ಎನ್ನುವುದು ಅವರ ಅನುಭವದ ಮಾತು.

ಸಹಾಯವಾಣಿಗೆ ಬರುವ ಕರೆಗಳಲ್ಲಿ ಅನೇಕ ಕರೆಗಳಲ್ಲಿ, ಸಹಾಯದ ಕೋರಿಕೆಗಳೇ ಇರುತ್ತದೆ. ಹಿರಿಯ ನಾಗರಿಕರಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷವೇ ಆತಂಕ ಹೆಚ್ಚಾಗಿದೆ. ಯಾಕೆಂದರೆ ತಮ್ಮ ಮಕ್ಕಳೇ ಅಗಲುವ ಸುದ್ದಿಯನ್ನು ಎಲ್ಲಿ ಕೇಳಬೇಕಾದೀತೋ ಎಂಬ ಭಯ ಅವರನ್ನು ಪ್ರತಿ ದಿನ ಕಾಡುತ್ತಿದೆ.

‘ಕೋವಿಡ್‌ನಿಂದ ಉಂಟಾಗುವ ಸಾವುನೋವಿನ ಭಯ ಒಂದೆಡೆಯಾದರೆ, ಲಾಕ್‌ಡೌನ್‌ನಿಂದ ಹಿರಿಯ ನಾಗರಿಕರಿಗೆ ಎದುರಾಗುವ ಕಷ್ಟಗಳು ಮತ್ತೊಂದೆಡೆ. ನಿಯಮಿತವಾಗಿ ಮಾಡಬೇಕಾದ ಆರೋಗ್ಯ ತಪಾಸಣೆಗೆ ತೆರಳಲು ಅವರಿಗೆ ಅವಕಾಶವಿಲ್ಲ, ದಿನಸಿ ಸಾಮಾನುಗಳನ್ನು ತಂದುಕೊಡುವವರೂ ಇಲ್ಲ, ಆನ್‌ಲೈನ್ ವ್ಯವಹಾರದ ಅರಿವಿಲ್ಲದೆ ಅವರು ಪಾಡು ಪಡಬೇಕಾಗುತ್ತದೆ. ಒಂಟಿ ವೃದ್ಧರು ಇರುವ ಮನೆಗಳಲ್ಲಿ ಬೇರೆಯದೇ ಸಮಸ್ಯೆಗಳು ಎದುರಾಗುತ್ತವೆ. ಲಾಕ್‌ಡೌನ್ ಕಾರಣದಿಂದಾಗಿ ಅಕ್ಕಪಕ್ಕದ ಮನೆಗಳಲ್ಲಿ ಹೆಚ್ಚು ಜನರು ಸೇರಿರುವುದರಿಂದ, ಆಸ್ತಿಪಾಸ್ತಿ ಜಗಳ, ಗಡಿ ಗುರುತಿನ ಜಗಳಗಳಿಗೆ ಈಗ ಹೆಚ್ಚಿನ ಬಲ ಬಂದಿದೆ. ಪಕ್ಕದ ಮನೆಯ ದೊಡ್ಡ ಸಮೂಹದ ಎದುರು ಒಂಟಿ ವೃದ್ಧರು ಜಗಳಾಡಲು ಸಾಧ್ಯವಾಗದೇ ಸೋಲುತ್ತಾರೆ. ಅವರ ಅಸಹಾಯಕತೆಯ ಅರಿವಿದ್ದವರೂ, ಜಗಳವನ್ನು ತೀವ್ರಗೊಳಿಸುವುದುಂಟು. ಇಂತಹ ಸಮಸ್ಯೆಗಳನ್ನು ಹೇಳಿಕೊಂಡು, ಸಹಾಯವಾಣಿಗೆ ಕರೆಗಳು ಬರುತ್ತಿವೆ.

ಈ ಎಲ್ಲ ವಿಚಾರಗಳಿಗಿಂತ ದೊಡ್ಡ ಗೊಂದಲವೆಂದರೆ, ಕೋವಿಡ್ ರಕ್ಷಣೆಗಾಗಿ ಹಾಕಿಸಿಕೊಳ್ಳಬೇಕಾದ ಲಸಿಕೆ ಕುರಿತಾದುದು. ಲಸಿಕೆ ಎಲ್ಲಿ ಸಿಗುತ್ತದೆ ಎಂಬುದೊಂದು ಪ್ರಶ್ನೆಯಾದರೆ, ಅಲ್ಲಿಯವರೆಗೆ ಪ್ರಯಾಣಿಸಲು ನೆರವು ಕೋರುವವರು ಇನ್ನು ಕೆಲವರು. ಕೆಲವೊಮ್ಮೆ, ಲಸಿಕೆಗಾಗಿ ಸರದಿ ಸಾಲಿನಲ್ಲಿ ನಿಂತರೂ, ಕೊನೆಯ ಕ್ಷಣದಲ್ಲಿ ಲಸಿಕೆ ಸಿಗದೇ ಅವರು ಮರಳಬೇಕಾಗುತ್ತದೆ. ಇತ್ತೀಚೆಗೆ ಹಿರಿಯ

